सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ರಾಜ್ಯ ಚುನಾವಣಾ ಆಯೋಗದ ನಡವಳಿಗಳು :

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಸಂಬಂಧವಾಗಿ ದಿನಾಂಕ: 07-12-2009 ರಂದು ಹೊರಡಿಸಿರುವ ಆದೇಶವನ್ನು ರದ್ದು ಪಡಿಸುವ ಬಗ್ಗೆ

ಓದಲಾಗಿದೆ: 1. ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ ರಾಚುಅ:72:ಇಯುಬಿ:2009 ದಿನಾಂಕ: 07-12-2009

2. ಸರ್ವೋಚ್ಚ ನ್ಯಾಯಾಲಯವು ಪ್ರಕರಣ ಸಂಖ್ಯೆ ಎಸ್‌ಎಲ್‌ಪಿ: 21269-21270/2009(ಎಸ್‌ಎಲ್‌ಪಿ.949-950/2010) ದಿ:28-01-2010 ರಲ್ಲಿ ನೀಡಿರುವ ತೀರ್ಪು

3. ಸರ್ಕಾರದ ಪತ್ರ ಸಂಖ್ಯೆ ನಅಇ:161:ಕೆಎಂಆರ್:2009 ದಿನಾಂಕ:29-01-2010

**ಪ್ರಸ್ತಾವನೆ:**

ರಾಜ್ಯ ಚುನಾವಣಾ ಆಯೋಗವು ಓದಲಾದ (1)ರಲ್ಲಿನ ದಿನಾಂಕ: 07-12-2009ರ ಆದೇಶ ಸಂಖ್ಯೆ ರಾಚುಅ:72:ಇಯುಬಿ:2009 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡಗಳಿಗೆ ಚುನಾವಣೆಯನ್ನು ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಓದಲಾದ (2)ರಲ್ಲಿನ ದಿನಾಂಕ: 28-01-2010 ರಂದು ನೀಡಿದ ತೀರ್ಪಿನಲ್ಲಿ ಎಸ್‌ಎಲ್‌ಪಿ ಯನ್ನು ವಜಾ ಮಾಡಿದ್ದು, ರಾಜ್ಯ ಸರ್ಕಾರವು ಮೀಸಲಾತಿ ಪಟ್ಟಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಮೇಲ್ಮನವಿ ಸಂಖ್ಯೆ 4331/2009 ಮತ್ತು ಸಂಬಂಧಪಟ್ಟ ವಿಷಯಗಳಲ್ಲಿ ದಿನಾಂಕ: 08-12-2009 ರಲ್ಲಿ ನೀಡಿರುವ ಆದೇಶದಂತೆ ನಿಗದಿ ಪಡಿಸಬೇಕಾಗಿರುತ್ತದೆ. ಆದರೆ, ರಾಜ್ಯ ಸರ್ಕಾರವು ಈವರೆಗೂ ಮೀಸಲಾತಿ ಪಟ್ಟಿಯನ್ನು ನಿಗದಿ ಪಡಿಸಿ ಸಲ್ಲಿಸಿರುವುದಿಲ್ಲ.

ಸರ್ಕಾರವು ಓದಲಾದ (3) ರಲ್ಲಿನ ಪತ್ರದಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 28-01-2010 ರಂದು ನೀಡಿರುವ ಆದೇಶದನ್ವಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಹೇಳಿರುವ ಮೀಸಲಾತಿ ನೀತಿಯಂತೆ ವಾರ್ಡುಗಳ ಮೀಸಲಾತಿ ಪಟ್ಟಿಯನ್ನು ಮತ್ತೆ ಹೊಸದಾಗಿ ತಯಾರಿಸಬೇಕಾಗಿರುವುದಾಗಿ ತಿಳಿಸಿರುತ್ತಾರೆ.

ಈ ಮೇಲ್ಕಂಡ ಕಾರಣಗಳಿಂದಾಗಿ ರಾಜ್ಯ ಚುನಾವಣಾ ಆಯೋಗವು ದಿನಾಂಕ: 07-12-2009 ರಂದು ಹೊರಡಿಸಿದ ಚುನಾವಣಾ ವೇಳಾಪಟ್ಟಿಯಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯನ್ನು ನಡೆಸಲು ಸಾಧ್ಯವಿಲ್ಲದಂತಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗವು ಈ ಕೆಳಕಂಡಂತೆ ನಿರ್ಧರಿಸಿದೆ. ಅದರಂತೆ ಈ ಆದೇಶ:

**ಆದೇಶ ಸಂಖ್ಯೆ ರಾಚುಅ:72:ಇಯುಬಿ:2009, ಬೆಂಗಳೂರು ದಿನಾಂಕ: 29-01-2010**

ಪ್ರಸ್ತಾವನೆಯಲ್ಲಿನ ವಿವರಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗವು ಭಾರತ ಸಂವಿಧಾನದ ಅನುಚ್ಛೇದ 243 ಝೆಡ್‌ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ

ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976ರ ಪ್ರಕರಣ 24 ರಂತೆ ರಾಜ್ಯ ಚುನಾವಾಣಾ ಆಯೋಗವು ದಿನಾಂಕ: 07-12-2009 ದ ಆದೇಶ ಸಂಖ್ಯೆ ರಾಚುಆ:72:ಇಯುಬಿ:2009 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗಾಗಿ ಹೊರಡಿಸಿದ್ದ ಚುನಾವಣಾ ವೇಳಾಪಟ್ಟಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ರಾಜ್ಯ ಸರ್ಕಾರವು ಮೀಸಲಾತಿ ಪಟ್ಟಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ನಂತರ ಹೊಸ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗುತ್ತದೆ.

ಆದೇಶಾನುಸಾರ,

ಸಿ.ಆರ್. ರೇವಣ್ಣ

(ಸಿ.ಆರ್. ರೇವಣ್ಣ)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ